ವಕೀಲಿ ಬೆಂಚಿನ ಮೇಲೆ ಕೂರಿಸಿ ಒಲುಮೆಯಿಂದ ವಿಚಾರಿಸಿದಾಗ, ದೇವಪ್ಪಾಳ್ವರು ತನ್ನೊಳಗೆ ಇನ್ನೂ ಕ್ಷೀಣವಾಗಿದ್ದ ತಮ್ಮ ಸಮಸ್ಯೆಯ ಪಿಂಡಿಯನ್ನು ಬಲವಾಗಿ ಮತ್ತೆ ಬಲವಾಗಿ ಮಾವನತ್ತ ಉರುಳಿಸಿದ್ದರು. ದೇವಪ್ಪಾಳ್ವರ ಸಮಸ್ಯೆಯನ್ನು ನಸುನಗುತ್ತಲೇ ಕೇಳಿಸಿಕೊಂಡ ತಿಬಾರುಗುತ್ತಿನ ಒಡೆಯರು, ಬಂದ ನೆಂಟರಿಬ್ಬರೂ ಉಪ್ಪುಮೆಣ್ಸು ನುರಿದ ಮಜ್ಜಿಗೆನೀರನ್ನು ಕುಡಿಯುತ್ತಿದ್ದರೆ, ಇತ್ತ ತಮ್ಮ ಅನುಭವದ ಮಾತುಗಳ ಗಂಟನ್ನು ಬಿಚ್ಚಿಕೊಂಡರು...

'ಅಲ್ವನಾ ದೇವೂ... ಆ ಮಯ್ಯರು ಹೇಳಿದ್ರಲ್ಲಿ ಏನು ತಪ್ಪಿದೆ ಮಾರಾಯ? ಒಂದು ರೀತಿಯಲ್ಲಿ ಅವರು ಹೇಳಿದ್ದು ಸರಿಯೇ... ನಮ್ಮ ಆಗಮಶಾಸ್ತ್ರದ ಪ್ರಕಾರ ದೇವಸ್ಥಾನಕ್ಕೆ ಸಾಗುವಾನಿ ಮರವನ್ನೇ ಹಾಕುವುದು, ದೈವಸ್ಥಾನಕ್ಕೆ ಬಿಳಿ ಕೇಪಳವೇ ಹಾಕುದು. ಕೊಡಿಮರ ಅಂದ್ರೆ ಏನು? 'ದೈವ ದೇವರಿಗೆ ದೃಷ್ಟಿಯಾಗದಿರಲಿ, ನಾನೇ ಮುಂದೆ ನಿಂತು ಈ ದೈವ–ದೇವರು–ದೇವಸ್ಥಾನವನ್ನು ರಕ್ಷಿಸುತ್ತಿದ್ದೇನೆ' ಎಂಬಂತೆ ಎದೆ ಸೆಟೆಸಿಕೊಂಡು, ದೈವಸ್ಥಾನ–ದೇವಸ್ಥಾನದ ಮುಕುಟವನ್ನೂ ಮೀರಿ ಎತ್ತರಕ್ಕೆ ನಿಲ್ಲುವ ಗರುಡಕಂಬವೇ ಈ ಕೊಡಿಮರ. ಈ ಕೊಡಿಮರವು ತನ್ನ ತಲೆಯಲ್ಲಿ ಹೊತ್ತಿರುವ ಸಂಕೇತಗಳ ಮೂಲಕ ಅದು ವಿಷ್ಣುವಿನ ದೇವಸ್ಥಾನವೋ, ಶಿವನ ದೇವಸ್ಥಾನವೋ, ಶಕ್ತಿ ದೇವತೆಯ ದೇವಸ್ಥಾನವೋ ಎಂದು ಸಾರಿ ಹೇಳುತ್ತದೆ ಕೂಡಾ.'

'ಹಾಗಾದ್ರೆ ಗರುಡಗಂಬ ಅಂತ ಗಟ್ಟದ ಮೇಲಿನವ್ರು ಹೇಳುದು ಇದಕ್ಕೆನಾ? ಅಂದ್ರೆ ಆ ಕಂಬದಲ್ಲಿ ಗರುಡ ಬಂದು ಕೂತುಕೊಳ್ತದೋ ಏನೋ?' ಎಂದು ಮಾರಪ್ಪಾಳ್ವರು ಕೇಳಿದಾಗ,

'ಉಮ್ಮ, ಅದೆಲ್ಲ ನಂಗೆ ಗೊತ್ತಿಲ್ಲ ಮಾರಾಯ... ಯಾವುದೋ ಕಾಲದಲ್ಲಿ ನಂಗೆ ಹೀಗಂತ ನಮ್ಮ ಭಟ್ರುಗಳು ಹೇಳಿದ್ದು ಅದರಲ್ಲಿ ಎಷ್ಟು ಸತ್ಯವುಂಟೋ ನಂಗೂ ಗೊತ್ತಿಲ್ಲ. ಆದ್ರೆ ನಮ್ಮ ಕೊಡಿಮರದ ಬಗ್ಗೆ ನನಗೆ ಚೆನ್ನಾಗಿ ಗೊತ್ತು. ಈ ಕೊಡಿಮರ ನಮ್ಮ ದೇವಸ್ಥಾನದ ಮುಕುಟವನ್ನು ಮೀರಿ ನಿಲ್ಲಬೇಕು ಅಂದ್ರೆ, ಈ ಬಿಳಿಕೇಪಳ ಮರದ ಎತ್ತರ ಸಾಕಾಗುತ್ತನಾ?!... ಬಿಳಿಕೇಪಳ ಮರ ಎತ್ತರ ಎಷ್ಟು ಬೆಳೆಯುತ್ತೆ ಅಂತ ನಂಗೊತ್ತು. ನಮ್ಮ ಕಟೀಲು, ಕಿನ್ನಿಗೋಳಿ, ಕುತ್ತೆತ್ತೂರು, ಸೂರಿಂಜೆಯ ಕಾಡಲ್ಲಿ ಆ ಮರಗಳು ಎಷ್ಟೊಂದು ಇದ್ವು... ಗೊತ್ತಾ! ಗಟ್ಟಿ ಗನಾಗಟ್ಟಿ ಮರ ಮಾರಾಯ... ಅದು. ಆದ್ರೆ ಅಂವು ತುಂಬಾ ಎತ್ತರ ಬೆಳೆಯುದೇ ಇಲ್ಲ. ಅದಕ್ಕೇ ಇರ್ಬೇಕು ದೊಡ್ಡ ದೇವಸ್ಥಾನಗಳ ಕೊಡಿಮರಗಳಿಗೆ ತೇಗದ ಮರಗಳನ್ನೇ ಬಳಸುದು. ತೊರ್ತಲಿನ(ಸುರತ್ಕಲ್ಲಿನ) ಮಹಾಲಿಂಗೇಶ್ವರರ ದೇವಳದ ಕೊಡಿಮರ ಯಾವುದು ಹೇಳು? ಪುತ್ತೂರು ಮಹಾಲಿಂಗೇಶ್ವರದ ಕೊಡಿಮರ ಯಾವುದು? ಕಟೀಲನ ಕೊಡಿಮರ ಯಾವುದು ಗೊತ್ತಾ? ಎಲ್ಲವೂ ತೇಗವೇ.'

ತನ್ನ ಮಾತನ್ನು ಒಂದರೆ ಗಳಿಗೆ ಅಲ್ಲಿಗೇ ತುಂಡರಿಸಿ ಒಂದು ಗುಟುಕು ನೀರು ಮಜ್ಜಿಗೆ ಕುಡಿದ ಗುತ್ತಿನೊಡೆಯರು ಆ ಮಾತಿನೆಳೆಯನ್ನು ಮತ್ತೆ ಮುಂದುವರಿಸಿದ್ದರು...

'ಮಾರಾಯ... ದೈವಸ್ಥಾನವು ದೇವಸ್ಥಾನಕ್ಕಿಂತ ಸಣ್ಣದಿರುವ ಕಾರಣಕ್ಕೆ, ಬಿಳಿಕೇಪಳ ಮರ ಸಿಗುತ್ತಿದ್ದ ಕಾಲದಲ್ಲಿ, ದೈವಸ್ಥಾನದ ಎತ್ತರಕ್ಕೆ ಸರಿಯಾದ ಗಟ್ಟಿ ಮರ ಎಂದು ಅದನ್ನು ಬಳಸುತ್ತಿದ್ರು. ಈಗ ಎಲ್ಲಿದೆ ಮಾರಾಯ... ಆ ಮರದ ಸಂತಾನ! ಅಲ್ಲೊಂದು ಇಲ್ಲೊಂದು ಇರಬಹುದೇನೋ? ನೀನು ಅದನ್ನು ಹುಡುಕುತ್ತಾ ಕೂತೆ ಅಂದ್ರೆ ಹಾವಿನೆಡೆಯಲ್ಲಿ ನಿನ್ನದು ನಾಗಮಣಿಯನ್ನು ಹುಡುಕಿದ ಕತೆ ಅಷ್ಟೆ. ನೋಡಪ್ಪ... ಕಾಲಕ್ಕೆ ತಕ್ಕ ಹಾಗೆ ನಾವು ಕೋಲ ಕಟ್ಲೇ ಬೇಕು. ನೀನು ತೇಗದ ಮರವನ್ನು ಹಾಕಿ ನಿನ್ನ ಕೊಡಿಮರದ ಕೆಲ್ಸವನ್ನೊಮ್ಮೆ ಮುಗ್ಸಿಬಿಡು. ನೀವು ಹೇಗೂ ಕಟೀಲಿಗೆ ಹೊರಟಿದ್ದೀರಿ; ಈ ಧರ್ಮಸಂಕಟವನ್ನು ಒಮ್ಮೆ ನಮ್ಮ ದೊಡ್ಡ ಅಸ್ರಣ್ಣರಲ್ಲೂ ಕೇಳಿಬಿಡಿ. ಈ ಸೂದ್ರನ ಬಾಯಿದ್ದು ಯಾಕೆ ಸುಮ್ಮನೆ?...' ಎಂದು ನಕ್ಕು ಹೇಳುತ್ತಾ ಕೂತಲ್ಲಿಂದ ಎದ್ದವರೇ, 'ಆಯ್ತು... ಆಯ್ತು... ನೀವೇನು ಊಟಕ್ಕೆ